MR. SPEAKER.—One Member can raise one matter under Rule 334 in one week. That is the restriction imposed unde rules.

ಶ್ರೀ ಪಿ. ರಾಮ್‌ದೇವ್.—ವನಸ್ಪತಿಯಲ್ಲಿ ದನದ ಕೊಬ್ಬನ್ನು ಬೆರೆಸಿ ಮಾರಾಟ ಮಾಡಿದ್ದಾರೆ. ನಾನು ಇದರ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ. ಈಗಾಗಲೇ ಕೇಂದ್ರ ಸರ್ಕಾರ ಅಂತಹವರನ್ನ್ನೆ ನ್ಯಾಷನಲ್ ಸೆಕ್ಯೂರಿಟಿ ಆ್ಯಕ್ಟ್ ಪ್ರಕಾರ ಬಂಧಿಸಿ ಇದನ್ನು ಸೀಜ್ ಮಾಡಬೇಕೆಂದು ಹೇಳಿದೆ...

MR. SPEAKER.—How does this Government can decide it ?

ಶ್ರೀ ಪಿ. ರಾಮ್‌ದೇವ್.—ವನಸ್ಪತಿಯಲ್ಲಿ ದನದ ಕೊಬ್ಬು ಮಿಶ್ರಣ ಮಾಡಿರುವುದರಿಂದ ರಿಲಿಜಯನ್ಸ್ ಸೆಂಟಿಮೆಂಟ್ಸ್‌ಗೆ ಎಫೆಕ್ಟ್ ಆಗುತ್ತದೆ. ಹೀಗಾಗಿ ವನಸ್ಪತಿಯನ್ನು ಕೊಂಡುಕೊಳ್ಳುವುದಕ್ಕೇ ಜನರು ಸಂಶಯ ಪಡುತ್ತಿದ್ದಾರೆ. ಇದನ್ನು ಮಾರಾಟ ಮಾಡುವ ಜೈನ ಕಂಪನಿಯನ್ನು ಈಗಾಗಲೇ ಸೀಜ್ ಮಾಡಿದ್ದಾರೆ. ಇಲ್ಲಿ ಏನು ಮಾಡಿದ್ದೀರಿ ? ದಯವಿಟ್ಟು ಇದರ ಬಗ್ಗೆ ಹೇಳಿಕೆ ಕೊಡಬೇಕು. ನಾನು ಇದನ್ನು ಫೋನ್ನಲ್ಲಿ ಕೇಳಿದ್ದಕ್ಕೆ ಸೋಮವಾರ ತೆಗೆದುಕೊಳ್ಳೋಣ ಎಂದು ಹೇಳಿದ್ದೀರಿ...

ಅಧ್ಯಕ್ಷರು.—ಇದು ರಾಜ್ಯಕ್ಕೆ ಸೀಮಿತವಾದ ಪ್ರಶ್ನೆ ಅಲ್ಲವೆಂದು ನನ್ನ ಭಾವನೆ...

ಶ್ರೀ ಪಿ. ರಾಮ್‌ದೇವ್.—ಈ ವನಸ್ಪತಿಯನ್ನು ಈ ರಾಜ್ಯದಲ್ಲೂ ಮಾರಾಟ ಮಾಡುತ್ತಿದ್ದಾರೆ. ಇದರಿಂದಾಗಿ ಲಕ್ಷಾಂತರ ರೂಪಾಯಿಗಳ ಲಾಭ ಪಡೆಯುತ್ತಿದ್ದಾರೆ. ಮಾನ್ಯ ಅಧ್ಯಕ್ಷರೇ, ವನಸ್ಪತಿ ಎಣ್ಣೆಗೆ ದನದ ಕೊಬ್ಬನ್ನು ಬೆರೆಸುತ್ತಿದ್ದು ಅದನ್ನು ರಾಜ್ಯದಲ್ಲಿ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಹಿಂದೂ ಸಮಾಜದಲ್ಲಿ ತೀವ್ರ ಪರಿಣಾಮವಾಗುವುದಕ್ಕೆ ಆಸ್ಪದವಾಗುತ್ತದೆ. ವನಸ್ಪತಿ ಎಣ್ಣೆಯನ್ನು ಬಹುಶಃ ನಿಮ್ಮ ಮನೆಯಲ್ಲೂ ಉಪಯೋಗಿಸಬಹುದೆಂದು ನಾನು ಭಾವಿಸುತ್ತೇನೆ.

ಅಧ್ಯಕ್ಷರು.—ನಮಗೆ ಅದರಿಂದ ಏನೂ ತೊಂದರೆಯಾಗುವುದಿಲ್ಲ.

ಶ್ರೀ ಪಿ. ರಾಮ್‌ದೇವ್.—ದನದ ಕೊಬ್ಬನ್ನು ಹಾಕಿದರೆ, ದನದ ಕೊಬ್ಬನ್ನು ತಾವು ತಿನ್ನುವುದಿಲ್ಲವೆಂದು ನಾನು ನಂಬಿದ್ದೇನೆ.

ವರದಿಯನ್ನೊಪ್ಪಿಸುವುದು

ಶ್ರೀ ಪಿ. ಪಿ. ಪೆಗ್ಗೆ.—ಗುಲ್ಬರ್ಗ ಜಿಲ್ಲೆ ಚಿತ್ತಾಪುರ ತಾಲ್ಲೂಕಿನ ತೆಂಗಾಲಿ ಗ್ರಾಮದಲ್ಲಿ ಸವರ್ಣೀಯರಿಂದ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರಿಗಾದ ಕಿರುಕುಳದ ವಿಚಾರವಾಗಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯವರ ಕಲ್ಯಾಣ ಸಮಿತಿಯ ಪರವಾಗಿ ಈ ವರದಿಯನ್ನು ಈ ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು.—ವರದಿ ಮಂಡಿಸಲಾಯಿತು.

ಶ್ರೀ ವೈ. ರಾಮಕೃಷ್ಣ.—ವರದಿಯನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಆದರೆ ನಾನು ರಿಪೋರ್ಟಿನ ಮೆರಿಟ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ.

MR. SPEAKER.—How can you proceed then ? The report is already presented.

ಶ್ರೀ ವೈ. ರಾಮಕೃಷ್ಣ.—ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ನಾನು ಇಲ್ಲಿ ನಿಂತಿದ್ದೇನೆ. 29ನೇ ತಾರೀಖು ಮೀಟಿಂಗನ್ನು ಕರೆದಿದ್ದರು. ಅದನ್ನು ಮುಂದೂಡಿದರು. ಪುನಃ 30ನೇ ತಾರೀಖು ಮೀಟಿಂಗನ್ನು ಕರೆದಿದ್ದಾರೆ. ಆದರೆ ಆ ದಿನ ಸಭೆಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗಳ ಬೇಡಿಕೆಯ ಮೇಲೆ ಆದಂತಹ ಚರ್ಚೆಯಲ್ಲಿ ಪ್ರಥಮವಾಗಿ ಭಾಗವಹಿಸಿ ನಾನು ಮಾತನಾಡುತ್ತಾ ಇಡೀ ದಿವಸ ಸಭೆಯಲ್ಲಿ ಇದ್ದೆ. ಆ ಸಂದರ್ಭದಲ್ಲಿ ಸಮಿತಿಯವರು ಸಭೆಯನ್ನು ಕರೆದು ಈ ಒಂದು ವರದಿಯನ್ನು ತಯಾರು ಮಾಡಿದ್ದಾರೆ. ಆದ್ದರಿಂದ ಈ ವರದಿಗೆ ನಾನು ಭಾಗಿಯಲ್ಲ.

ಅಧ್ಯಕ್ಷರು.—ಸಮಿತಿಯಲ್ಲೇ ಮೆಜಾರಿಟಿ ಇರಬೇಕು; ಅದಕ್ಕೇ ವರದಿಯನ್ನು ಮಾಡಿದ್ದಾರೆ.

ಶ್ರೀ ವೈ. ರಾಮಕೃಷ್ಣ.—ಆ ವರದಿಯನ್ನು ತಯಾರು ಮಾಡುವುದಕ್ಕೆ ಇರತಕ್ಕಂತಹ ಕಾನೂನನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದ್ದರಿಂದ ಈ ಬಗ್ಗೆ ನನ್ನದೊಂದು ವರದಿಯನ್ನು ಸಭೆಯ ಮುಂದೆ ಇಡುವುದಕ್ಕೆ ಅನುಮತಿ ಕೊಡಿ.

ಅಧ್ಯಕ್ಷರು.—ತಮಗೆ ಗೊತ್ತಿದ್ದ ಹಾಗೆ ಈ ವರದಿಯನ್ನು ಸಭೆಯಲ್ಲಿ ಇಡುವುದಕ್ಕಿಂತ ಮುಂಚೆ, ಸಮಿತಿಯಿಂದ ಪರಿಶೀಲಿಸಲ್ಪಟ್ಟು, ಅಂಗೀಕರಿಸಲ್ಪಟ್ಟಿದೆ ಎಂದು ಅದರಲ್ಲಿ ಹೇಳಿದ್ದಾರೆ.

SRI Y. RAMAKRISHNA.—I am pleading my inability for the absence there.

ಶ್ರೀ ಪಿ. ರಾಮ್‌ದೇವ್.—ಮಾನ್ಯ ಸದಸ್ಯರಾದ ಶ್ರೀ ರಾಮಕೃಷ್ಣರವರು ಹಿಂದೆ ಕಾನೂನು ಮಂತ್ರಿಗಳಾಗಿ ಕೆಲಸ ಮಾಡಿದಂತಹವರು. ಅಧಿವೇಶನದಲ್ಲಿ ಯಾರಾದರೂ ಸದಸ್ಯರು ಬರದಿದ್ದರೆ ಆ ಸಮಯದಲ್ಲಿ ಸದನದಲ್ಲಿ ಆದಂತಹ ತೀರ್ಮಾನಕ್ಕೆ ನಾನು ಭಾಗಿಯಲ್ಲ ಎಂದು ಹೇಳಿದರೆ ಹೇಗೆ ? ಅದು ಅಷ್ಟೊಂದು

ಮುಖ್ಯವಾದುದು ಎಂಬುದಾಗಿ ಅವರು ತಿಳಿದುಕೊಂಡಿದ್ದಾರೆ, ಸಭೆಯಲ್ಲಿ ಭಾಗವಹಿಸಬೇಕು. ಸಮಿತಿಯಲ್ಲೇ ಅವರು ತಮ್ಮ ಡಿಸೆಂಟ್ ನೋಟ್ ಕೊಟ್ಟುಬಿಟ್ಟಿದ್ದರೆ ಅದು ಬೇರೆ ಪ್ರಶ್ನೆ. ಈ ತರಹ ಇಲ್ಲಿ ಬಂದು ಮಾತನಾಡುವುದರಿಂದ ಹೊಸ ಪ್ರಿಸಿಡೆಂಟ್‌ನ್ನು ಕ್ರಿಯೇಟ್ ಮಾಡಿದ ಹಾಗೆ ಆಗುತ್ತದೆ.

SRI Y. RAMAKRISHNA.—It is my fundamental right and I am asserting my fundamental right. ಆ ದಿವಸ ಸಭೆಯಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಗಳ ಬೇಡಿಕೆಯ ಮೇಲೆ ಅದಂತಹ ಚರ್ಚೆಯಲ್ಲಿ ನಾನೇ 3 ಗಂಟೆಯಿಂದ 5 ಗಂಟೆಯ ವರೆಗೂ ಭಾಷಣ ಮಾಡುತ್ತಾ ಇದ್ದೆ. ಆ ಸಂದರ್ಭದಲ್ಲಿ ಸಮಿತಿಯವರು ಸಭೆಯನ್ನು ಕರೆದರೆ ನಾನು ಹೇಗೆ ಆ ಸಮಿತಿಯ ಸಭೆಯಲ್ಲಿ ಭಾಗವಹಿಸಲಿ? ಆದ್ದರಿಂದ ತಾವು ತಮ್ಮ ಅಧಿಕಾರವನ್ನು ಚಲಾಯಿಸಿ ನನಗೆ ನನ್ನ ವರದಿಯನ್ನು ಸಭೆಯಲ್ಲಿ ಮಂಡಿಸುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಆ ವರದಿಯನ್ನು ಈಗಾಗಲೇ ಸಭೆಯ ಮುಂದೆ ಮಂಡಿಸಲಾಗಿದೆ.

ಶ್ರೀ ವೈ. ರಾಮಕೃಷ್ಣ.—ಪಾಮು. ಆದರೆ ಈ ಬಗ್ಗೆ ನನ್ನದೊಂದು ವರದಿಯನ್ನು ಸಭೆಯಲ್ಲಿ ಮಂಡಿಸುವುದಕ್ಕೆ ಅನುಮತಿಯನ್ನು ಕೊಡಿ. ನಾನು ನನ್ನ ವರದಿಯನ್ನು ಇಲ್ಲಿ ಮಂಡಿಸುವುದಕ್ಕಾಗುವುದಿಲ್ಲ ಎಂದರೆ ಏಕೆ ಮಂಡಿಸುವುದಕ್ಕಾಗುವುದಿಲ್ಲ ಎಂಬುದನ್ನು ನಮಗೆ ಹೇಳಿ. ನಾನೂ ಕೂಡ ಈ ಸಮಿತಿಯ ಸದಸ್ಯನಾಗಿದ್ದೇನೆ. ನಾನು ಇಲ್ಲಿ ಭಾಷಣವನ್ನು ಮಾಡುತ್ತಿರುವಾಗ ಅವರು ಅಲ್ಲಿ ವರದಿಯನ್ನು ಅಂಗೀಕರಿಸಿದರೆ ಅದಕ್ಕೆ ನಾನು ಭಾಗಿಯಲ್ಲ. ಆದ್ದರಿಂದ ನನ್ನ ವರದಿಯನ್ನು ಸಭೆಯಲ್ಲಿ ಮಂಡಿಸುವುದಕ್ಕೆ ಅನುಮತಿಯನ್ನು ಕೊಡಿ.

ಅಧ್ಯಕ್ಷರು.—ತಾವೂ ಕೂಡ ಕಾನೂನು ಮಂತ್ರಿಗಳಾಗಿದ್ದವರು. ನಾನು ಸಭೆಗೆ ಬರುವುದಕ್ಕೆ ಆಗುವುದಿಲ್ಲವೆಂದು ಸಮಿತಿಗೆ ಬರೆದು ಕಳುಹಿಸಿದ್ದೀರಾ?

ಶ್ರೀ ವೈ. ರಾಮಕೃಷ್ಣ.—ಅವರಿಗೆ ನಾನು ಸ್ವತಃ ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ಆಗುವುದಿಲ್ಲವೆಂದೂ ಹೇಳಿದ್ದೇನೆ. ಆದರೂ ವರದಿಯನ್ನು ತಯಾರು ಮಾಡಿದರು. ಕನಿಷ್ಠ ಆ ಡ್ರಾಫ್ಟ್ ವರದಿಯನ್ನಾದರೂ ನನ್ನ ಗಮನಕ್ಕೆ ತಂದಿಲ್ಲ. ನಾನು ಅದನ್ನು ಓದಿಯೂ ಇಲ್ಲ.

MR SPEAKER.—This is the Committee of the entire House and a very important Committee. You are also a Member of that Committee. What transpired in the Committee is not a subject-matter for debate here.

ಶ್ರೀ ವೈ. ರಾಮಕೃಷ್ಣ.—ಸಕಾರಣಗಳಿಂದ ನಾನು ಅಲ್ಲಿ ಹಾಜರಾಗುವುದಕ್ಕೆ ಆಗಲಿಲ್ಲ.

MR. SPEAKER.—May I intervene for a minute? See Rule 232. It reads like this :

"(1) The report of a Committee shall be presented to the House by the Chairman or in his absence by the member of the Committee.

(2) In presenting the report, the Chairman or, in his absence, the member presenting the report shall, if he makes any remarks, confine himself to a brief statement of fact, but there shall be no debate on that statement at this stage."

SRI Y. RAMAKRISHNA.—That is why, I may be permitted to present this report.

MR. SPEAKER.—It cannot be part and parcel of the report.

ಶ್ರೀ ವೈ. ರಾಮಕೃಷ್ಣ.—ನನಗೆ ಇಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಡಿ. ನಾನು ಇಲ್ಲಿ ಮಾತನಾಡುತ್ತಿರುವಾಗ ಕಮಿಟಿ ಸದಸ್ಯರು ವರದಿಯನ್ನು ತಯಾರು ಮಾಡಿದರು. ಅದನ್ನು ಹೇಳುವುದಕ್ಕೆ ತಾವು ನನಗೆ ಅಪ್ಪಣೆ ಕೊಡದಿದ್ದರೆ ಇನ್ನು ಯಾರು ಕೊಡಬೇಕು? ಸದನದಲ್ಲಿ ಅಂದು ಭಾಷಣ ಮಾಡಬೇಕಾಗಿದ್ದು, ಅಲ್ಲಿ ಹಾಜರಾಗುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಸಮಿತಿಯ ಅಧ್ಯಕ್ಷರಲ್ಲಿ ಸ್ವತಃ ಅರಿಕೆ ಮಾಡಿಕೊಂಡಿದ್ದೇನೆ.

ಅಧ್ಯಕ್ಷರು.—ನಿಮ್ಮ ಅಭಿಪ್ರಾಯವನ್ನು ಸಮಿತಿಗೆ ತಿಳಿಸಬೇಕಾಗಿತ್ತು. ಇವತ್ತಿನ ಅಜೆಂಡಾದಲ್ಲಿ ನಿಮ್ಮ ವರದಿಯನ್ನು ಸದನದಲ್ಲಿ ಮಂಡಿಸಲಾಗುವುದು ಎಂಬುದಾಗಿ ಬಂದಿದೆಯೋ?

ಶ್ರೀ ವೈ. ರಾಮಕೃಷ್ಣ.—ಇವತ್ತಿನ ಅಜೆಂಡದಲ್ಲಿ ಏನಿದೆ ಎಂಬುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋಗುತ್ತಿಲ್ಲ.

MR. SPEAKER.—Under what provision of the law, please tell me.